ರಾಜ್ಯದಲ್ಲಿ ಸ್ವಚ್ಛ ಗ್ರಾಮಯೋಜನೆ.

210(426)

ಶ್ರೀ ರಾಮದಾಸ್ ಎ.(ಕೃಷ್ಣರಾಜಾ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮಹತ್ವಾಕಾಂಕ್ಷೆಯ ಸ್ವಚ್ಛ ಗ್ರಾಮ ಯೋಜನೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಾರಿಯಾಗಿದೆಯೆ?

ಆ. ಹಾಗಿದ್ದಲ್ಲಿ, ವಿವಿಧ ಇಲಾಖೆಗಳ ನಡುವೆ ಸಮನ್ವಯದ ಕೊರತೆ ಉಂಟಾಗಿರುವ ಅಂಶ ಬೆಳಕಿಗೆ ಬಂದಿದೆಯೆ?

ಇ. ಇದರ ಜಾರಿಗೆ ಯಾವ ಸಂಸ್ಥೆ ನೆರವು ಪಡೆಯಲಾಗುವುದು; ಅಭಿವೃದ್ಧಿ ಕಾರ್ಯಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆಯೇ?

ಈ. ಈ ಯೋಜನೆಯ ಅನುಷ್ಠಾನಕ್ಕೆ ಹಣದ ಕೊರತೆ ಉಂಟಾಗಿದೆಯೇ? (ವಿವರ ನೀಡುವುದು)

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ. ಎಲ್ಲ ಜಿಲ್ಲೆಗಳಲ್ಲಿ ಜಾರಿ ಮಾಡಲಾಗುತ್ತಿದೆ.

ಆ. ಇಲ್ಲ.

ಇ. ಈ ಯೋಜನೆಯ ಅನುಷ್ಠಾನಕ್ಕಾಗಿ ಕರ್ನಾಟಕ ಭೂ ಸೇನಾ ನಿಗಮವು ಕೇಂದ್ರ ಸಂಸ್ಥೆಯಾಗಿದ್ದು ಅಂದಾಜು ಪಟ್ಟಿಗಳನ್ನು ತಯಾರಿಸಲಾಗುತ್ತಿದೆ.

ಈ. ಇಲ್ಲ. ಸ್ವಚ್ಛ ಗ್ರಾಮ ಯೋಜನೆಯನ್ನು ಹುಡ್ಕೋ ಸಂಸ್ಥೆಯ ರೂ. 160.00 ಕೋಟಿಗಳ ಆರ್ಥಿಕ ನೆರವಿನೊಂದಿಗೆ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಮತ್ತು ಕರ್ನಾಟಕ ಭೂ ಸೇನಾ ನಿಗಮವು ಸದರಿ ಸಂಸ್ಥೆಯಿಂದ ಮೊದಲನೇ ಕಂತನ್ನು ಸಧ್ಯದಲ್ಲೇ ಪಡೆಯಲಿದೆ. ರಾಜ್ಯ ಸರ್ಕಾರವು ತನ್ನ ಪಾಲಿನ ಶೇಕಡ 50ರಷ್ಟು ಹಣವನ್ನು (ರೂ. 10.00 ಕೋಟಿಗಳನ್ನು) ಈಗಾಗಲೇ ನಿಗಮಕ್ಕೆ ಬಿಡುಗಡೆ ಮಾಡಿದೆ.

ಗಿಡಮೂಲಿಕೆ ಅಭಿವೃದ್ಧಿಗಾಗಿ ಪ್ರಾಧಿಕಾರ ರಚಿಸುವ ಕುರಿತು.

211(477)

ಶ್ರೀ ರಾಮದಾಸ್.ಎಸ್.(ಕೃಷ್ಣರಾಜಾ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಿಡ ಮೂಲಿಕೆ ಅಭಿವೃದ್ಧಿಗಾಗಿ ಪ್ರತ್ಯೇಕ ಪ್ರಾಧಿಕಾರ ರಚಿಸಲು ಸರ್ಕಾರ ನಿರ್ಧರಿಸಿದೆಯೆ?

ಆ) ನಿರ್ಧರಿಸಿದಲ್ಲಿ ಕಾರಣಗಳೇನು ಮತ್ತು ಔಷಧಿ ಮೂಲವಿರುವ (ಸ್ಥಳ) ವನ ಸಂಪತ್ತನ್ನು ಗುರುತಿಸಲಾಗಿದೆಯೇ? ಹಾಗಿದ್ದಲ್ಲಿ ಆ ಸ್ಥಳಗಳು ಯಾವುವು?

ಇ) ಇವುಗಳ ಅಭಿವೃದ್ಧಿಗಾಗಿ ಹಾಲಿ ಇರುವ ಕಾರ್ಯ ಯೋಜನೆಗಳೇನು?

ಈ) ಈ ನಿಟ್ಟಿನಲ್ಲಿ ಪರಂಪರಾಗತ ವೈದ್ಯ ಪದ್ಧತಿಯನ್ನು (ನಾಟಿವೈದ್ಯ) ಪ್ರಚಲಿತಗೊಳಿಸಲು ನಾಟಿ ವೈದ್ಯರ ಪೋಷಣೆಗೆ ಇದರಿಂದ ನೆರವು ನೀಡಲಾಗುವುದೆ?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ದಿನಾಂಕ: 30-10-2000ದಂದು ನವದೆಹಲಿಯಲ್ಲಿ ನಡೆದ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರುಗಳ ಸಮ್ಮೇಳನದಲ್ಲಿ ಗಿಡಮೂಲಿಕೆ ಅಭಿವೃದ್ಧಿಗಾಗಿ ಕೇಂದ್ರ ಮಟ್ಟದಲ್ಲಿ ಹಾಗೂ ಎಲ್ಲಾ ರಾಜ್ಯಗಳ ಮಟ್ಟದಲ್ಲಿ ಪ್ರತ್ಯೇಕ ಪ್ರಾಧಿಕಾರವನ್ನು ರಚಿಸಲು ತೀರ್ಮಾನಿಸಲಾಗಿದೆ. ಈ ಬಗ್ಗೆ ಕೇಂದ್ರ ಮಟ್ಟದಲ್ಲಿ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಗಿಡಮೂಲಿಕೆ ಅಭಿವೃದ್ಧಿಗಾಗಿ ಪ್ರತ್ಯೇಕ ಪ್ರಾಧಿಕಾರವನ್ನು ರಚಿಸುವ ಬಗ್ಗೆ ಸಂಬಂಧಿಸಿದ ಇಲಾಖೆಗಳ ಪರಿಣಿತರೊಂದಿಗೆ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಯ ಕಾಲೇಜುಗಳ ಪ್ರಾಚಾರ್ಯರುಗಳೊಂದಿಗೆ ಸಮಾಲೋಚಿಸಿ ಪರಿಶೀಲಿಸಲಾಗುತ್ತಿದೆ.

ಆ) ಈ ಕುರಿತು ಅರಣ್ಯ ಇಲಾಖೆ, ದ್ರವ್ಯಗುಣ ವಿಭಾಗದ ಪರಿಣಿತರು ಮತ್ತು ಆಯುರ್ವೇದ ಕಾಲೇಜುಗಳ ಪ್ರಾಚಾರ್ಯರೊಂದಿಗೆ ಸಭೆ ಕರೆದು ಚರ್ಚಿಸಲಾಗಿ ಅವರುಗಳ ಅಭಿಪ್ರಾಯಗಳನ್ನು ಪಡೆದು ಈ ಸಂಬಂಧವಾದ ಅರಣ್ಯ ತೋಟಗಾರಿಕೆ ಮತ್ತು ಕೃಷಿ ಇಲಾಖೆಗಳೊಂದಿಗೆ ಪತ್ರ ವ್ಯವಹಾರ ನಡೆದಿರುತ್ತದೆ.

ಇ) ಈಗ ರಾಜ್ಯ ಸರ್ಕಾರದಿಂದ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಗೆ ಬೇಕಾದ ರೀತಿಯಲ್ಲಿ ಆಯಾಯ ಕಾಲೇಜುಗಳಿಗೆ ಹೊಂದಿಕೊಂಡಂತೆ ಗಿಡಮೂಲಿಕೆಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ ಹಾಗೂ ಅರಣ್ಯ ಇಲಾಖೆಯ ಸಂಯೋಜನೆಯಡಿಯಲ್ಲಿ

ಸಹ ಗಿಡಮೂಲಿಕೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯಯೋಜನೆ ಮುಂದುವರಿಯುತ್ತಿದೆ.

ಈ) ಪರಿಶೀಲಿಸಲಾಗುವುದು.

ನಿಷ್ಕ್ರಿಯೋಜಕ ಸರ್ಕಾರಿ ಆಸ್ಪತ್ರೆಗಳನ್ನು ಸಹಕಾರ ಸಂಸ್ಥೆಗಳಿಗೆ ದತ್ತು ನೀಡುವುದು.

212(478)

ಶ್ರೀ ರಾಮದಾಸ್ ಎ.(ಕೃಷ್ಣರಾಜ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆಸ್ಪತ್ರೆಗಳನ್ನು ಸಹಕಾರಿ ಸಂಸ್ಥೆಗಳಿಗೆ ದತ್ತು ನೀಡುವ ಕುರಿತು ಸರ್ಕಾರಚಿಂತಿಸುತ್ತಿದೆಯೆ? ಇದ್ದಲ್ಲಿ ಇದಕ್ಕೆ ಕಾರಣಗಳೇನು?

ಆ) ಸದರಿ ಯೋಜನೆಯ ಸಾಧಕ-ಬಾಧಕಗಳನ್ನು ಸರ್ಕಾರ ಪರಿಶೀಲಿಸಿದೆಯೆ? (ವಿವರ ನೀಡುವುದು)

ಇ) ದತ್ತು ನೀಡಬೇಕಾಗಿರುವ ಆಸ್ಪತ್ರೆಗಳ ಪಟ್ಟಿ ಸಿದ್ಧಪಡಿಸಲಾಗಿದೆಯೇ? (ಆಸ್ಪತ್ರೆಗಳ ಜಿಲ್ಲಾವಾರು ಮಾಹಿತಿ ನೀಡುವುದು)?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶಿಕ್ಷಣ ಇಲಾಖೆಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಬಟ್ಟೆ ಪೂರೈಕೆ ಮಾಡುವಲ್ಲಿ ವಿಳಂಬವಾಗಿರುವುದು.

213(479)

ಶ್ರೀ ಎ.ರಾಮದಾಸ್(ಕೃಷ್ಣರಾಜ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ